<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.</u>

**MVC.184/2023**

| | | |
|---|---|---|
| ಸಾಕ್ಷಿದಾರರ ಹೆಸರು | ಹರೀಶ್ ಎಲ್.ಸಿ | ಆರ್.ಡಬ್ಲ್ಯೂ:3 |
| ತಂದೆಯ ಹೆಸರು | ಚಂದ್ರಾ ನಾಯ್ಕ ಎಂ | |
| ವಯಸ್ಸು | 35 ವರ್ಷ | |
| ಉದ್ಯೋಗ | ಪ್ರಭಾರ superintendent, RTO., Chikkamagaluru | |
| ವಾಸ ಸ್ಥಳ | ಚಿಕ್ಕಮಗಳೂರು | |

ದಿನಾಂಕ: 09.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ **2** ನೇ ಎದುರುದಾರರ ಪರ ಶ್ರೀ ಸಿ.ಒ.ವೈ ವಕೀಲರಿಂದ</u>

1. ನಾನು ಚಿಕ್ಕಮಗಳೂರಿನ ಆರ್.ಟಿ.ಓ ಕಚೇರಿಯ ಪ್ರಭಾರ superintendent ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. 1 ನೇ ಎದುರುದಾರ ಕಾಳಯ್ಯ ಹೆಚ್.ಆರ್ ಬಿನ್ ರಾಮಯ್ಯ ರವರು ತಮ್ಮ ಆಟೋ ರಿಕ್ಷಾ ಸಂಖ್ಯೆ ಕೆ.ಎ.18/ಸಿ.1583 ಅನ್ನು ದಿ: 19.08.2017 ರಂದು ನೊಂದಾಯಿಸಿಕೊಂಡು ವಾಹನದ ರಹದಾರಿ ಅನ್ನು ಮಾಡಿಸಿಕೊಂಡಿರುತ್ತಾರೆ. ಸದರಿ ರಹದಾರಿ ದಿ: 18.08.2022 ರವರೆಗೆ ಇತ್ತು ಹಾಗೂ ವಾಹನ ಮಾಲೀಕರು ದಿ: 10.04.2023 ರಂದು ರಹದಾರಿಯನ್ನು ನವೀಕರಿಸಿರುತ್ತಾರೆ. ಸದರಿ ರಹದಾರಿ ದಿ: 09.04.2028 ರವರೆಗೆ ಚಾಲ್ತಿಯಲ್ಲಿ ಇರುತ್ತದೆ. ಆ ಬಗ್ಗೆ ಆರ್.ಟಿ.ಓ ರವರು ನೀಡಿರುವ ವರದಿಯನ್ನು ಸದರಿ ವಾಹನದ ವಿವರಗಳನ್ನು ಮತ್ತು ಸದರಿ ವಾಹನದ B-Extract ಅನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ.ಆರ್.9 ರಿಂದ 11 ಎಂದು ಗುರುತಿಸಲಾಯಿತು.

3. ಯಾವುದೇ ವಾಹನವನ್ನು ರಸ್ತೆಯಲ್ಲಿ ಚಲಾಯಿಸಲು ರಹದಾರಿಯ ಅಗತ್ಯತೆ ಇದೆ ಎಂದರೆ ಸರಿ. ದಿ: 09.12.2022 ರಂದು ಆಟೋ ಸಂಖ್ಯೆ ಕೆ.ಎ.18/ಸಿ.1583 ಕ್ಕೆ ರಹದಾರಿ ಇರಲಿಲ್ಲ.

<u>ಪಾಟೀ ಸವಾಲು ಶ್ರೀ ಹೆಚ್.ಆರ್.ಸಿ ವಕೀಲರಿಂದ – ಅರ್ಜಿದಾರರ ಪರವಾಗಿ</u>

4. ರಹದಾರಿ ಅವಧಿ ಮುಗಿದ ಬಳಿಕ ನಂತರ ಆರ್.ಟಿ.ಒ ಕಚೇರಿಗೆ ಅರ್ಜಿಯನ್ನು ಸಲ್ಲಿಸಿ ಸದರಿ ರಹದಾರಿಯನ್ನು ನವೀಕರಿಸಬಹುದು ಎಂದರೆ ಸರಿ. 1 ನೇ ಎದುರುದಾರ ರಹದಾರಿಯನ್ನು ದಿಃ 10.04.2023 ರಂದು ನವೀಕರಿಸಿರುತ್ತಾರೆ. ರಹದಾರಿಯನ್ನು ತಾಲೂಕಿನಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ಚಲಾಯಿಸಲು ನೀಡಲಾಗಿರುತ್ತದೆ. 20 ಕಿಮೀ ವ್ಯಾಪ್ತಿಗಿಂತ ಹೊರಗೆ ಹೋದರೆ ರಹದಾರಿಯ ಅವಶ್ಯಕತೆ ಇದೆ ಎಂದರೆ ಸಾಕ್ಷಿ ಆಟೋಗಳಿಗೆ 20 ಕಿಮೀ ವ್ಯಾಪ್ತಿಗಿಂತ ಹೆಚ್ಚಿನ ರಹದಾರಿಯನ್ನು ನೀಡುವುದಿಲ್ಲ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲು ಶ್ರೀ ಹೆಚ್.ಕೆ.ಡಿ ವಕೀಲರಿಂದ – 1 ನೇ ಎದುರುದಾರರ ಪರವಾಗಿ</u>

5. ಅಪಘಾತದ ಪ್ರಕರಣದಲ್ಲಿ ಆಟೋದ IMV ವರದಿಯನ್ನು ಆರ್.ಟಿ.ಒ ರವರು ನೀಡಿರುತ್ತಾರೆ. IMV ವರದಿಯಲ್ಲಿ ರಹದಾರಿಯ ವ್ಯಾಪ್ತಿಯ ಹೊರಗಡೆ ಅಪಘಾತ ಆಗಿದೆ ಎಂದು ಹೇಳಿದ್ದಾರ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಆದ ಸ್ಥಳ ಮೂಡಿಗೆರೆಯಿಂದ 2 ½ ಕಿಮೀ ಅಂತರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

<u>**ಮರು ವಿಚಾರಣೆಃ**</u> ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ